ಇಂಗ್ಲಿಷ್‌ನಲ್ಲಿ ಭಾಷಣ ಮಾಡುತ್ತಿದ್ದರು. ಸಭಿಕರು ಕನ್ನಡದಲ್ಲಿ ಮಾತಾಡಲು ಒತ್ತಾಯಿಸಿದರೂ ಮಣಿಯಲಿಲ್ಲ. ಆಗ ವೇದಿಕೆ ಮೇಲಿದ್ದ ಬಿಬಿಯವರು, 'ಕನ್ನಡ ಪುಸ್ತಕವನ್ನು ಓದುವುದರಿಂದ ದೇಶಪ್ರೇಮ, ಸ್ವತಂತ್ರ ವಿಚಾರಶಕ್ತಿ, ಧೈರ್ಯ, ಸೇವಾಭಾವನೆ ಗುಣಗಳು ಬರುವುದಿಲ್ಲ; ಇಂಗ್ಲಿಷ್ ಓದುವುದರಿಂದ ವಿಚಾರಶಕ್ತಿ, ಸ್ವತಂತ್ರ ಮನೋಭಾವ, ದೇಶಪ್ರೇಮ, ಎಲ್ಲಾ ಬರುತ್ತವೆ; ಕನ್ನಡದ ಅಭಿಮಾನದ ಪರದೆ ಎಳೆದು ಇಂಗ್ಲಿಷ್ ಓದಬೇಡಿ ಎಂದು ಯಾರಾದರೂ ಹೇಳಿದರೆ, ಅವರ ಮಾತನ್ನು ಕೇಳಬೇಡಿ' ಎಂದು ಕರೆ ನೀಡಿದರೆಂದು ಪತ್ರಿಕೆಗಳು ವರದಿ ಮಾಡಿದವು. ಇದು 'ಕನ್ನಡ ಸಾಹಿತ್ಯದಲ್ಲೇನಿದೆ, ಬೂಸಾ' ಎಂದು ಹೇಳಿದರೆಂದು ಪ್ರಚಾರ ಪಡೆಯಿತು.

ಬಿಬಿಯವರ ಹೇಳಿಕೆಗೆ ಲೇಖಕರು, ಕನ್ನಡ ಚಳವಳಿಗಾರರು ಹಾಗೂ ರಾಜಕಾರಣಿಗಳು ಭಾವಾವೇಶದಲ್ಲಿ ಪ್ರತಿಕ್ರಿಯಿಸಲು ಆರಂಭಿಸಿದರು. ಗಲಭೆಗಳು ಭುಗಿಲೆದ್ದವು. 'ಬೂಸಾ ಹೇಳಿಕೆಗೆ ಉಗ್ರ ಪ್ರತಿಭಟನೆ', 'ಪೌರಾಡಳಿತ ಸಚಿವರ ವಿರುದ್ಧ ಬೃಹತ್ ವಿದ್ಯಾರ್ಥಿ ಪ್ರದರ್ಶನ', 'ಪೌರಾಡಳಿತ ಮಂತ್ರಿ ಪದಚ್ಯುತಿಗೆ ಒತ್ತಾಯ', 'ಬಸವಲಿಂಗಪ್ಪ ವಿರುದ್ಧ ಸಹಿ ಸಂಗ್ರಹಕ್ಕೆ ಕರೆ', 'ಪ್ರಚೋದನೆಗೆ ಬಲಿ ಆಗದಿರಿ – ವಿದ್ಯಾರ್ಥಿಗಳಿಗೆ ಬಸವಲಿಂಗಪ್ಪ ಕರೆ', 'ಬೂಸಾಹೇಳಿಕೆ ತೀವ್ರ ಪರಿಗಣನೆ ಸಲ್ಲದು – ಅರಸು', ಮುಂತಾದ ಪತ್ರಿಕಾ ವರದಿಯ ತಲೆಬರಹಗಳು, ಸನ್ನಿವೇಶದ ಪ್ರಕ್ಷುಬ್ಧತೆಯನ್ನು ಸೂಚಿಸುತ್ತವೆ. ಕೆಲವೆಡೆ ಲಾಠಿಚಾರ್ಜು ಆಗಿ ಹಿಂಸಾಚಾರ ಸಂಭವಿಸಿತು. ಬಸ್ಸಿಗೆ ಬೆಂಕಿ ಇಡಲಾಯಿತು. ಕತ್ತೆ ಮೆರವಣಿಗೆ ನಡೆಸಲಾಯಿತು. ವಿಧಾನಸೌಧದ ಮುಂದೆ ಪ್ರತಿಕೃತಿ ಸುಡಲಾಯಿತು. ಕನ್ನಡ ಸಂಘಟನೆಗಳು ಬೆಂಗಳೂರು ಬಂದ್‌ಗೆ ಕರೆ ನೀಡಿದವು. ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಯಿತು. ಕಡಿದಾಳು ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಗಲಭೆಗಳ ಬಗ್ಗೆ ವರದಿ ಕೊಡಲು ಸಮಿತಿ ನೇಮಿಸಲಾಯಿತು. ಪರಿಸ್ಥಿತಿಯನ್ನು ಹತೋಟಿಗೆ ತರಲು ಅಸಾಧ್ಯವಾದರೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕೆಂದು ವಿರೋಧಪಕ್ಷದ ಎಚ್.ಡಿ. ದೇವೇಗೌಡರು ಒತ್ತಾಯಿಸಿದರು.

ಆಗ ಬಿಬಿಯವರು 'ಮಲಹೊರುವ ಪದ್ಧತಿ ರದ್ದುಮಾಡಿದ್ದರಿಂದ ಕಸಿವಿಸಿಗೊಂಡ ಕೆಲವರು, ನನ್ನ ವಿರುದ್ಧ ಹೀಗೆ ಅಪಪ್ರಚಾರ ಮಾಡುತ್ತಿದ್ದಾರೆ. ಇಂತಹವರು ಕಾಂಗ್ರೆಸ್ ಪಕ್ಷದಲ್ಲೂ ಇದ್ದಾರೆ. ಇವರಿಂದ ನನ್ನ ಮಂತ್ರಿ ಪದವಿ ಹೋಗಲೂಬಹುದು. ಆದರೆ, ನಾನು ಅಂಬೇಡ್ಕರ್ ಅವರ ನಿಲುವುಗಳ ಪ್ರತಿಪಾದನೆಯನ್ನು ಮುಂದುವರೆಸುತ್ತೇನೆ' ಎಂದು ಪ್ರತಿಕ್ರಿಯಿಸಿದರು. ತಮ್ಮದೊಂದು ಸಂದರ್ಶನದಲ್ಲಿ 'ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಯಾವರ್ಥದಲ್ಲಿ ಹೇಳಿದಿರಿ?' ಎಂಬ ಪ್ರಶ್ನೆಗೆ ಉತ್ತರಿಸುತ್ತ, 'ಯಾರೋ ನಿರ್ಮಿಸಿದ ಚೌಕಟ್ಟಿನಲ್ಲಿ ಸಿಕ್ಕಿದ್ದೇವೆ. ಆ ಚೌಕಟ್ಟಿನಿಂದ ಪಾರಾಗುವುದೇ ಹೊಸಅಲೆ. ಈ ವಿಷಯ ಕುರಿತು ಸಾಹಿತ್ಯ ಶ್ರೀಮಂತವಾಗಬೇಕು; ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳಲ್ಲಿ ಪರಾಕ್ರಮ, ದೇಶಭಕ್ತಿ, ಸಮಾಜವಾದಿ ಸಮಾಜ ರಚನೆಗೆ ಸಹಾಯಕವಾಗುವ ವಿಚಾರಗಳು ಲಭ್ಯವಾಗಲಾರವು. ಅವುಗಳಲ್ಲಿ ಕೇವಲ ಹಳೇವಾದ, ಶೋಷಣೆವಾದ, ಶುಷ್ಕವಾದ ಕಂಡುಬರುತ್ತದೆ. ನಮ್ಮ ವಿದ್ಯಾರ್ಥಿಗಳು ಬೇರೆಬೇರೆ ದೇಶದ ಕ್ರಾಂತಿಕಾರಕ ಪುಸ್ತಕಗಳನ್ನು ಓದಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಬೇಕು. ಇದಿಲ್ಲದ ಸಾಹಿತ್ಯ ಬೂಸಾ ಎಂದು ನಾನು ಸಾಂದರ್ಭಿಕವಾಗಿ ನುಡಿದಿದ್ದೆ' ಎಂದು ವಿವರಣೆ ಕೊಟ್ಟಿದ್ದರು.

ಸ್ವತಃ ಮುಖ್ಯಮಂತ್ರಿಗಳು ಸಹೋದ್ಯೋಗಿಯ ಬೆಂಬಲಕ್ಕೆ ನಿಂತು, 'ಬಸವಲಿಂಗಪ್ಪನವರು ಇಡೀ ಕನ್ನಡ ಸಾಹಿತ್ಯ ಕುರಿತು ಹಾಗೆ ನುಡಿದಿಲ್ಲ; ನಿರ್ದಿಷ್ಟ ಸಾಹಿತ್ಯವನ್ನು ಕುರಿತು ಮಾತ್ರ ಟೀಕಿಸಿದ್ದಾರೆ. ಅವರು ಸ್ಪಷ್ಟೀಕರಣ ಕೊಟ್ಟ ಬಳಿಕವೂ ಚಳವಳಿ ಪ್ರತಿಚಳವಳಿ ನಡೆಯುತ್ತಿರುವುದು ಉಚಿತವಲ್ಲ. ಕನ್ನಡದ ಲೇಖಕರು ಯಾರಿಗೂ ಕಡಿಮೆಯವರಲ್ಲ. ಅವರಿಂದ ಉನ್ನತ ದರ್ಜೆಯ ಸಾಹಿತ್ಯ ನಿರ್ಮಾಣವಾಗಿದೆ' ಎಂದು ಸಮಜಾಯಿಷಿ ನೀಡಿದರು.